ಹುಬ್ಬಳ್ಳಿಯ ‘ಆನಂದ ಗ್ರಂಥಮಾಲಾ’ದವರು ‘ನವಯುಗ’ ಪತ್ರಿಕೆಯ ಸಹಾಯಕ ಸಂಪಾದಕ ಶಿ. ಶಿದ್ದಪ್ಪ ಅವರ ಪತ್ರರೂಪದ ಸಂಸಾರ ಚಿತ್ರಗಳನ್ನು ‘ಪೂರ್ಣಿಮಾ’ (1952) ಹೆಸರಿನಲ್ಲಿ ಪ್ರಕಟಿಸಿದೆ. ಈ ಮಾಲೆಯಲ್ಲಿ ಮುಂದೆ ಬರಲಿರುವ ಪುಸ್ತಕಗಳು ಪಟ್ಟಿಯಲ್ಲಿ ಮೊದಲ ಹೆಸರು ಪ್ರೊ. ದ.ರಾ. ಬೇಂದ್ರೆ ಅವರದ್ದಾಗಿತ್ತು. ‘ಒಂದು ಕಾದಂಬರಿ’ ಎಂದು ಉಲ್ಲೇಖಿಸಲಾಗಿತ್ತು. ಯಾವುದದು? ಅದು ‘ಮಾನಸಪುತ್ರ’ ಆಗಿರಲಿಕ್ಕಿಲ್ಲ. ಯಾಕೆಂದರೆ ‘ಮಾನಸಪುತ್ರ’ ಪ್ರಕಟಿಸುವ ಪ್ರಕಟಣೆಯು ಮನೋಹರ ಗ್ರಂಥಮಾಲೆಯಿಂದ 1949ರಲ್ಲಿಯೇ ಪ್ರಕಟವಾಗಿತ್ತು. ಬೇರೆಯೇ ಕಾದಂಬರಿ ಆಗಿದ್ದರೆ ಅದು ಯಾವುದು? ಅದು ‘ಮಾನಸಪುತ್ರ’ ಆಗಿದ್ದರೆ ಮನೋಹರ ಗ್ರಂಥಮಾಲಾದ ಪಟ್ಟಿಯಿಂದ ಆನಂದ ಗ್ರಂಥಮಾಲಾದ ಪಟ್ಟಿಗೆ ವರ್ಗಾವಣೆ ಆಗಿದ್ದು ಯಾಕೆ?


ಪ್ರಶ್ನೆಗಳಿಗೆ ಅಂತ್ಯವೇ ಇಲ್ಲ. ಉತ್ತರ ಇಲ್ಲದ ಪ್ರಶ್ನೆಯೂ ಇರುವುದಿಲ್ಲ. ಇರುವ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕು.

ಪದ್ಯಗಳಿಗೆಹೆಸರಾದ‘ಅಂಬಿಕಾತನಯದತ್ತ’ರಾಗುವ ಮುನ್ನ ಬೇಂದ್ರೆಯವರು 1920ರಲ್ಲಿಯೇ ಬಸವಣ್ಣನವರನ್ನು ಕುರಿತ ಖಂಡಕಾವ್ಯ ಬರೆಯಲು ಉದ್ದೇಶಿಸಿದ್ದರು. ವಾರ್ಧಕ ಷಟ್ಪದಿಯಲ್ಲಿ ಬರೆಯಲು ಬಯಸಿದ್ದ ಈ ಕಾವ್ಯದ ಮೊದಲ ಷಟ್ಪದಿ ‘ಬಸವ ಬಯಲಾದ’.

**ಯಾರ ವಚನದ ಗಾಲಿಗೆದ್ದ ಹಾದಿಯ ಹುಡಿಯು**
**ಏರಿ ಗಗನಾಂಗಣದೊಳಾತು ಬೆಳಕಿನ ಕಿಡಿಯು**
**ಯಾರ ಸಂಗವ ಪಡೆದು ಅಂಗವೂ ಜಂಗಮವು ಲಿಂಗಮಯ ಲೀಲೆಯಾಯ್ತು**
**ಯಾರ ಬಾಯುಸುರಿನಿಂದಖಿಲ ಕರ್ನಾಟಕವು**
**ವೀರವೃತ್ತಿಯ ತಳೆದ ಧೀರ ಧರ್ಮಿಗಳಂತೆ**
**ಮೀರಿರುವ ಭಕ್ತಿಯಲಿಹುದೆನ್ನುವರಾರು ಆ ಬಸವ ಬಯಲಾದನೆಂದು.**

‘ಶತಮಾನ’ (2004)

ಆದರೆ, ಬಸವಣ್ಣನವರನ್ನು ಕುರಿತ ಕಾವ್ಯದ ಬದಲಿಗೆ ವಾರ್ಧಕ ಷಟ್ಪದಿಯಲ್ಲಿಯೇ ಬರೆದ ‘ಕೃಷ್ಣಾಕುಮಾರಿ’ (1922) ಶಾರದಾ ಮಂಡಲದಿಂದ ಪ್ರಕಟವಾಯಿತು. ವೆಂಕಟೇಶ ಭೀಮರಾವ ಆಲೂರು (ಆಲೂರು ವೆಂಕಟರಾಯ) ಪ್ರಕಟಿಸಿದರು.



ಬಸವಣ್ಣನವರನ್ನು ಕುರಿತು ಬೇಂದ್ರೆಯವರು ‘ಜಗದ್ವಿಲಕ್ಷಣಮೂರ್ತಿ ಬಸವಣ್ಣ’ ಎಂಬ ಲೇಖನ ಪ್ರಕಟಿಸಿದ್ದಾರೆ. ಆದರೆ, ಅವರ ಪ್ರೀತಿ–ಗೌರವ ಇದ್ದದ್ದು ಅಲ್ಲಮನ ಮೇಲೆ. ಅಲ್ಲಮನ ಮಾತಿನ ಮೋಡಿಗೆ ಒಳಗಾದ ಬೇಂದ್ರೆಯವರು ‘ಪ್ರಭುದೇವರ ಪ್ರತಿಯೊಂದು ಮಾತಿನಲ್ಲಿಯೂ ನಾವು ಜ್ಯೋತಿಯನ್ನು ಕಾಣಬಹುದು. ಜ್ಯೋತಿ ಎಂದರೆ ಮಾರ್ಗದರ್ಶಕ ಶಕ್ತಿ. ಇದು ವಿಜ್ಞಾನ ಮಾರ್ಗ’ ಎಂದು ಬರೆದಿದ್ದಾರೆ.

ಬೇಂದ್ರೆಯವರಿಗೆ ಅಲ್ಲಮ, ರತ್ನಾಕರವರ್ಣಿ, ಲಕ್ಷ್ಮೀಶ, ಸರ್ವಜ್ಞ, ಶರೀಫ್‌ರ ಕಾವ್ಯದ ಮೇಲಿನ ಪ್ರೀತಿ ಅವರ ಕಾವ್ಯದ ದಿಕ್ಕು–ದೆಸೆಗಳನ್ನು ನಿರ್ಧರಿಸಲು ಕಾರಣವಾಯಿತು. ‘ಗರಿ’ಯ ನಂತರ ಬೇಂದ್ರೆಯವರ ಕಾವ್ಯದ ದಿಕ್ಕೇ ಬದಲಾಯಿತು.

●